ಪಿ.ಡಬ್ಲ್ಯೂ–1

ದಿನಾಂಕ 21–02–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್.ಎನ್.ಎಚ್. ವಕೀಲರಿಂದ

17. ಕಾರವಾರದ ಕಡವಾಡದಲ್ಲಿರುವ ನನ್ನ ಸ್ನೇಹಿತನ ಜೊತೆ ನಾನು ಹಾಗೂ ಆರೋಪಿತರು ಅಂಕೋಲಾ ತಾಲೂಕಿನ ಹೆಬ್ಬುಳ ಗ್ರಾಮದಲ್ಲಿ ಒಂದು ಜಮೀನು ವ್ಯಾಪಾರಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಆರೋಪಿ ಅಗಸೂರಿನ ಒಂದು ಕಡೆ ಜಮೀನು ವ್ಯಾಪಾರಕ್ಕಾಗಿ ನೋಡಲು ಒಂದು ಸಾರಿ ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಅಲ್ಲಿಗೆ ನಾನು ಒಬ್ಬನೆ ಹೋಗಿದ್ದು, ಆರೋಪಿ ಅಲ್ಲಿ ನಿಂತಿದ್ದರು. ಆ ಜಮೀನಿನ ವ್ಯಾಪಾರ ಆಗಿಲ್ಲ. ಬರಿ ನೋಡಿ ಬಂದಿತ್ತು. ಹೆಬ್ಬುಳ ಮತ್ತು ಅಗಸೂರಿನ ಜಮೀನು ವ್ಯಾಪಾರಕ್ಕಾಗಿ ನೋಡಲು ಹೋದಾಗ ನನ್ನ ಜೊತೆ ಕಡವಾಡದ ರಾಜು ಎಂಬುವವರು ಕೂಡ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವ್ಯವಹಾರ ಮಾಡಿಕೊಂಡು ನಂಬಿಕೆಗೆ ಬೇಕಾಗಿ ಆರೋಪಿ ಒಂದು ಚೆಕ್ಕನ್ನು ಸದ್ರಿ ರಾಜುರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಪ್ರಕಾರ ಆರೋಪಿ ಮತ್ತು ನನ್ನ ಮದ್ಯೆ ಜಮೀನಿನ ಬಾಬ್ತು ಯಾವುದೇ ವ್ಯವಹಾರ ಆಗಿಲ್ಲ. ಆರೋಪಿ ಜೊತೆ ನನಗೆ ಯಾವುದೇ ಬಹಳ ಆತ್ಮೀಯ ಅನ್ಯೋನ್ಯತೆ ಇರಲಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಸ್ವಲ್ಪ ಅನ್ಯೋನ್ಯತೆ ಇತ್ತು ಹಾಗೂ ಹಣದ ಗರ್ಜಿದ್ದಾಗ ರೂ.5,000/– ಸಾಲ ಪಡೆದು ಕ್ಲಪ್ತ ಸಮಯದಲ್ಲಿ ವಾಪಸ್ಸು ಮಾಡುತ್ತಿದುದ್ದರಿಂದ ಸ್ವಲ್ಪ ಅನ್ಯೋನ್ಯತೆ ಇತ್ತು ಎಂದು ನುಡಿಯುತ್ತಾರೆ. ಆ ರೀತಿ ರೂ.5,000/– ಸಾಲ ಪಡೆದ ನಿರ್ದಿಷ್ಟ ದಿನಾಂಕ ನೆನಪಿಲ್ಲ. ಆದರೆ ಈ ಪ್ರಕರಣದ 1 ವರ್ಷದ ಹಿಂದೆ. ನನ್ನ ಪಿರ್ಯಾದಿಯಲ್ಲಿ ರೂ.5,000/– ಸಾಲ ಕೊಟ್ಟಿದನ್ನು ಕ್ಲಪ್ತ ಸಮಯದಲ್ಲಿ ವಾಪಸ್ಸು ನೀಡಿದ್ದಾರೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ.

18. ನಾನು ಎಸ್.ಎಸ್.ಎಲ್.ಸಿ. ತನಕ ವ್ಯಾಸಾಂಗ ಮಾಡಿದ್ದೇನೆ. ನನಗೆ ವ್ಯವಹಾರಿಕ ಜ್ಞಾನ ಇದೆ. ಯಾವುದೇ ಹಣದ ವ್ಯವಹಾರ ಮಾಡಿದಾಗ ಭದ್ರತೆಗಾಗಿ ಕರಾರು ಮಾಡಿಕೊಳ್ಳುವುದು ಅಥವಾ ಏನಾದರು ಭದ್ರತೆ ಪಡೆದುಕೊಳ್ಳುವುದು ಬೇಕಿದೆ ಎಂದು ನನಗೆ ಮಾಹಿತಿ ಇದೆ. ನನ್ನ ಮದುವೆ 2008 ರಲ್ಲಿ ಆಗಿರುತ್ತದೆ. ನಾನು ಯಾರ ಜೊತೆಯಾದರು ಹಣದ ವ್ಯವಹಾರ ಮಾಡಿದಾಗ ನನ್ನ ಹೆಂಡತಿ ಜೊತೆ ವಿಶೇಷವಾಗಿ ಚರ್ಚೆ ಮಾಡುವುದಿಲ್ಲ. ನಾನು ರೂ.10 ಸಾವಿರ, 5 ಸಾವಿರ ರೀತಿಯ ಸಾಲವನ್ನು ಕೆಲವರಿಗೆ ಕೊಟ್ಟಿದ್ದು ಅವರು ವಾಪಸ್ಸು ಕೂಡ ಮಾಡಿದ್ದಾರೆ. ಯಾವಾಗ ಮತ್ತು ಯಾರಿಗೆ ಸಾಲ ಕೊಟ್ಟಿದ್ದೇನೆ ಎಂದು ಈಗ ನೆನಪಿಲ್ಲ. ಸಾಕ್ಷಿ ಪುನಹ ಕಿರಣ್, ದಿನೇಶ್ ಎಂಬುವವರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅವರಿಬ್ಬರು ಅಂಕೋಲಾದವರು. ಅವರಿಗೆ ಯಾವುದೇ ಭದ್ರತೆ ಪಡೆದು ಸಾಲ ನೀಡಿದಲ್ಲ. ಸಾಕ್ಷಿ ಸ್ವತಹ ಗೆಳೆತನದಿಂದ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅವರ ಬೇರೆ ಗೆಳೆಯರನ್ನು ಕರೆಸಿ ಅವರ ಜವಾಬ್ದಾರಿ ಆಧಾರದಲ್ಲಿ ಸಾಲ ಕೊಟ್ಟದ್ದಲ್ಲ. ಆ ಹಣ ಮಾರುಕಟ್ಟೆಯಲ್ಲಿ ಕೊಟ್ಟಿದ್ದು.

19. ನನ್ನ ಪ್ರಕಾರ ಹೆಚ್ಚಿನ ಸಮಯ ನನ್ನ ಮನೆ ಹಾಗೂ ಅಂಗಡಿಯಲ್ಲಿಯೇ ಇರುತ್ತೇನೆ. ನನ್ನ ಎಂಟರ್ ಪ್ರೈಸಸ್ ನಲ್ಲಿ ಎಷ್ಟು ಖರ್ಚಾಯಿತು, ಎಷ್ಟು ಲಾಭ ಆಯಿತು ಎಂಬ ಬಗ್ಗೆ ಲೆಕ್ಕಚಾರವನ್ನು ಇಟ್ಟುಕೊಳ್ಳುತ್ತೇನೆ ಎಂದರೆ ಸರಿ. ಆ ಎಂಟರ್ ಪ್ರೈಸಸ್‌ನ ಆ ಲೆಕ್ಕಚಾರದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಎಂಟರ್ ಪ್ರೈಸಸ್ ಗೆ ಸಂಬಂಧಪಟ್ಟ ರಶೀದಿ ಪುಸ್ತಕ ಹಾಗೂ ಪರವಾನಿಗೆ ಪತ್ರ ಇರುತ್ತದೆ ಎಂದರೆ ಸರಿ. ಅಂತಹ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿದಿನದ ವ್ಯವಹಾರದ ಬಗ್ಗೆ ಚಾರ್ಟ್ ಮಾಡುತ್ತೇವೆ ಎಂದರೆ ಸಾಕ್ಷಿ ವ್ಯಾಪರವಾದ ಬಗ್ಗೆ ರಶೀದಿ ಕೊಡುತ್ತೇವೆ ಮಾತ್ರ ಎಂದು

ನುಡಿಯುತ್ತಾರೆ. ನಾನು ಆರೋಪಿಯ ಮನೆಗೆ ಹೋಗಿ ಅವರ ಆರ್ಥಿಕ ಸ್ಥಿತಿಯ ಬಗ್ಗೆ ಹಾಗೂ ಕುಟುಂಬದ ಬಗ್ಗೆ ತಿಳಿದುಕೊಂಡಿಲ್ಲ. ನಾನು ಆರೋಪಿಯ ಮನೆಗೆ ಹೋಗಿ ಅವರು ಸಾಲದ ಹಣ ನೀಡಿದರೆ ಮರುಪಾವತಿಯ ಮಾಡುವ ಸಾಮರ್ಥ್ಯ ಹೊಂದಿದ್ದಾರಾ ಎಂದು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಹಿಂದೆ ಎರಡು ಸಾರಿ ಸಾಲ ಪಡೆದು ಮರುಪಾವತಿಸಿರುವ ಆಧಾರದಲ್ಲಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

20. ಆರೋಪಿ ರೂ.80,000/– ಕೇಳಿದ್ದಾರೆ ನನ್ನ ಹೆಂಡತಿ ಜೊತೆ ಚರ್ಚೆ ಮಾಡಿಲ್ಲ. ನಾನು ಸಾಲ ಕೊಟ್ಟಿರುವುದು ನನ್ನ ಹೆಂಡತಿಗೆ ಗೊತ್ತಿಲ್ಲ. ನಾನು ಸಾಲ ನೀಡಿದೆ ಎಂದು ಹೇಳುವ ಹಣವನ್ನು ಯಾವ ಬ್ಯಾಂಕಿನಿಂದ ತಂದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ವ್ಯವಹಾರಿಕವಾಗಿ ಕೂಡಿಟ್ಟ ಹಣದಿಂದ ಕೊಟ್ಟೆ ಎಂದು ನುಡಿಯುತ್ತಾರೆ. ನನ್ನ ಜಾಗೃತಿ ಎಂಟರ್ ಪ್ರೈಸಸ್ ಗೆ ಹೆಂಡತಿ ಮಕ್ಕಳು ವವಹಾರದಲ್ಲಿ ಪಾಲ್ಗೊಳ್ಳಲು ಬರುವುದಿಲ್ಲ ಆದರೆ ಸಹಜವಾಗಿ ಯಾವಾಗದರು ಬಂದು ಹೋಗುತ್ತಾರೆ. ಷದ್ರಿ ಎಂಟರ್ ಪ್ರೈಸಸ್ ನಲ್ಲಿ ಕ್ಯಾಶ್ ಕೌಂಟರ್ ಅನ್ನು ಹಾಗೂ ನನ್ನ ಕಿಸೆಯಲ್ಲಿದ್ದ ಹಣವನ್ನು ನನ್ನ ಹೆಂಡತಿ ಪರಿಶೀಲಿಸುವುದಿಲ್ಲ. ಆರೋಪಿ ಚೆಕ್ಕು ಕೊಟ್ಟು ಬೌನ್ಸ್ ಆದಾಗ ನನ್ನ ಹೆಂಡತಿಗೆ ಆ ಸಾಲದ ವಿಚಾರ ಗೊತ್ತಾಗಿದೆ.

21. ಮಾರುಕಟ್ಟೆಯಿಂದ ನನ್ನ ಮನೆ ಸುಮಾರು 1.25 ಕಿ.ಮಿ. ದೂರದಲ್ಲಿದೆ. ಮಾರುಕಟ್ಟೆಯಲ್ಲಿ ಆರೋಪಿ ಹಣ ಕೇಳಿದರು ಎಂದು ಹೇಳುವ ಸಂದರ್ಭದಲ್ಲಿ ನಾನು ಮೊದಲು ಅಲ್ಲಿ ಇದ್ದೇನಾ ಅಥವಾ ಆರೋಪಿ ಇದ್ದರಾ ಎಂದು ನೆನಪಿಲ್ಲ. ಹಣ ಆರೋಪಿಗೆ ಕೊಟ್ಟೆ ಎಂದು ಹೇಳುವ ದಿನ ನಾನು ಮಾರುಕಟ್ಟೆಯಲ್ಲೆ ಇದ್ದೆ. ನಾನು ಮಾರುಕಟ್ಟೆಗೆ ಹಣ ತೆಗೆದುಕೊಂಡೆ ಹೋಗಿದ್ದೆ. ನಾನು ಮಾರುಕಟ್ಟೆಯಲ್ಲಿ ಆರೋಪಿಗೆ ಹಣ ಸಾಲ ಕೊಟ್ಟೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಾಜುರವರ ಜೊತೆ ಜಮೀನಿನ ವ್ಯಾಪರಕ್ಕೆ ಹೆಬ್ಬುಳ ಮತ್ತು ಅಗಸೂರಿಗೆ ಹೋಗಿದ್ದಾಗ ಸದ್ರಿ ರಾಜುರವರು ನನ್ನ ಮುಖಾಂತರ ಆರೋಪಿಗೆ ಮುಂಗಡವಾಗಿ ರೂ.5 ಸಾವಿರ ಕೊಟ್ಟಿರುವುದಕ್ಕೆ ಆರೋಪಿ ಸದ್ರಿ ರಾಜುವಿಗೆ ನಿಪಿ–1 ಹೇಳಿರುವ ಖಾಲಿ ಚೆಕ್ಕನ್ನು ನೀಡಿದ್ದರು ಎಂದರೆ ಸರಿಯಲ್ಲ. ಆ ನಂತರ ಸದ್ರಿ ಜಮೀನಿನ ವ್ಯಾಪಾರ ಕುದುರಿಸದೆ ಇದ್ದುದರಿಂದ ಸದ್ರಿ ಮುಂಗಡ ರೂ.5 ಸಾವಿರವನ್ನು ಆರೋಪಿ ರಾಜುರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಜುರವರು ಆ ಚೆಕ್ಕನ್ನು ವಾಪಸ್ಸು ನೀಡದೆ ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಆ ಖಾಲಿ ಚೆಕ್ಕಿನಲ್ಲಿ ರೂ.60 ಸಾವಿರ ಎಂದು ನಾನೇ ಬರೆದು ದಿನಾಂಕ 22–10–2013 ರಂದು ನಗಧಿಕರಣಕ್ಕೆ ಸಲ್ಲಿಸಿದೆ ಎಂದರೆ ಸಾಕ್ಷಿ ಆರೋಪಿಯೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಎಲ್ಲಿ ಬರೆದುಕೊಟ್ಟರು ಎಂದರೆ ಸಾಕ್ಷಿ ಮೊದಲೆ ಬರೆದುಕೊಂಡು ಸಿದ್ದಪಡಿಸಿ ಅದನ್ನು ತಂದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ–1 ರ ಚೆಕ್ಕು ಖಾಲಿ ಚೆಕ್ಕು ಇದ್ದು ಅದರಲ್ಲಿ ಸಹಿಯನ್ನು ನಾನೇ ಮಾಡಿಕೊಂಡಿರುವುದು ಎಂದರೆ ಸರಿಯಲ್ಲ.

22. 2010 ನೇ ಸಾಲಿನಲ್ಲಿ ವಿಜಯಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಕ್ಕೆ ವಿಲೀನವಾಗಿದೆ ಎಂದರೆ ಸರಿಯಲ್ಲ. ವಿಜಯಾ ಬ್ಯಾಂಕ್ ಆ ಬ್ಯಾಂಕಿಗೆ 2018–19 ರ ಸಾಲಿನಲ್ಲಿ ವಿಲೀನವಾಗಿದೆ. 2010 ನೇ ಸಾಲಿನಲ್ಲಿ ವಿಜಯಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಕ್ಕೆ ವಿಲೀನವಾಗಿರುವುದಕ್ಕೆ ಚೆಕ್ಕಿನಲ್ಲಿ ಐ.ಎಫ್.ಎಸ್.ಸಿ. ಕೊಡ್ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಂ.ಐ.ಸಿ.ಆರ್. ಮತ್ತು ಸಿ.ಸಿ.ಬಿ. ಕೊಡ್ ಕೂಡ ನಿಪಿ–1 ರಲ್ಲಿ ಇಲ್ಲ ಎಂದರೆ ಮಾಹಿತಿ ಇಲ್ಲ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವು ಆ ರೀತಿ ವಿಲೀನವಾಗಿರುವುದರಿಂದ ಇಂತಹ ಚೆಕ್ಕಿಗೆ ಮಾನ್ಯತೆ ಇಲ್ಲ ಎಂದು ಸುತ್ತೋಲೆ ಹೊರಡಿಸಿದೆ ಎಂದರೆ ಸಾಕ್ಷಿ ನನಗೆ ಚೆಕ್ಕಿ ನೀಡುವಾಗ ವಿಲೀನವಾಗಿಲ್ಲ ಎಂದು ನುಡಿಯುತ್ತಾರೆ.

23. ಆರೋಪಿಗೆ ನೋಟಿಸ್ ಜಾರಿಯಾಗಿದೆ ಇರುವುದರಿಂದ ಆರೋಪಿ ಯಾವುದೇ ಅಪರಾಧ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತ ಜಾಗೃತಿ ಎಂಟರ್ ಪ್ರೈಸಸ್ ನನ್ನ ಹೆಸರಿನಲ್ಲಿ ನಡೆಸಿಕೊಂಡು ಬಂದದ್ದೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ದಿನಾಂಕ 15-08-2015 ರಂದು ನನ್ನನ್ನು ಭೇಟಿಯಾಗಿ ರೂ.80 ಸಾವಿರ ಕೇಳಿದಾಗ ನಾನು ರೂ.60 ಸಾವಿರ ಕೈಗಡವಾಗಿ ನೀಡಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 22-10-2013 ರಂದು ನಾನು ನೀಡಿದ್ದೇನೆ ಎಂದು ಹೇಳುವಂತ ಹಣದ ಮರುಪಾವತಿಗೆ ನಿಪಿ-1 ಅನ್ನು ನೀಡಿದ್ದೆ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಸಾಲ ನೀಡಲು 2013 ರ ಆಗಸ್ಟ್ ಅಲ್ಲಿ ನನಗೆ ಸಾಮರ್ಥ್ಯವೆ ಇರಲಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ರೀತಿಯಲ್ಲಿ ರಾಜುಗೆ ಭದ್ರತೆಗಾಗಿ ನೀಡಿದ ಚೆಕ್ಕನ್ನು ನಾನು ಹಾಗೂ ರಾಜು ಸೇರಿ ನನ್ನ ಮೂಲಕ ದುರುಪಯೋಗ ಪಡಿಸಿಕೊಂಡಿರುವುದು ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ನಾನು ಹೇಳುವಂತ ಹಣಕಾಸಿನ ವ್ಯವಹಾರ ನಡೆದದ್ದೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ಕಬಳಿಸಲು ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.